# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ.
# ಸಿ ಸಿ -193/2021

ದಿನಾಂಕಃ 07.10.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಟಿ ಎಂ ಎಂ ಮಂಜುನಾಥ |
| ತಂದೆಯ ಹೆಸರು | : | ಟಿ ಎಂ ಎಂ ಕೊಟ್ರಯ್ಯ |
| ವಯಸ್ಸು | : | 22 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಮೈದೂರು |

## ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ

ಚಾ ಸಾ- 4 ನನ ತಂದೆ. ಚಾಸಾ- 5 ನನ್ನ ದೊಡ್ಡಪ್ಪ. ಚಾಸಾ- 6 ರಿಂದ 8 ರವರು ನಮ್ಮ ಊರಿನವರ. ದಿನಾಂಕ 18.06.2021 ರಂದು ಬೆಳಿಗ್ಗೆ ಸುಮಾರು 11.00 ಗಂಟೆಗೆ ನಮ್ಮ ಹೊಲದಲ್ಲಿ ಮಡಿಕೆಯನ್ನು ಹೊಡೆಯುತ್ತಿದ್ದಾಗ ಆರೋಪಿತರು ಎಲ್ಲರೂ ಏಕಾಏಕಿ ಗುಂಪುಕಟ್ಟಿಕೊಂಡು ಬಂದು ನಮಗೆಲ್ಲರಿಗೂ ಕಣ್ಣಿಗೆ ಕಾರದ ಪುಡಿ ಎರಚಿ, 5 ನೇ ಆರೋಪಿ ಕಟ್ಟಿಗೆಯಿಂದ ನಮ್ಮ ತಂದೆಯ ತಲೆಗೆ ಹೊಡೆದಿರುತ್ತಾರೆ. ಅದರ ಪರಿಣಾಮವಾಗಿ ನಮ್ಮ ತಂದೆಯ ತಲೆಯ ರಕ್ತ ಚಿಮ್ಮಿ ರಕ್ತಗಾಯವಾಗಿರುತ್ತದೆ. ಕೆಳಗೆ ಬಿದ್ದ ನಮ್ಮ ತಂದೆಗೆ ಆರೋಪಿತರೆಲ್ಲರೂ ಕಾಲಿನಿಂದ ಒದ್ದು, ಕಟ್ಟಿಗೆಯಿಂದ ಮೈ ಕೈ ಗೆ ಹೊಡೆದಿರುತ್ತಾರೆ. ಆ ಕಾಲಕ್ಕೆಚಾಸಾ 5 ರವರು ಹಿಡಿದುಕೊಳ್ಳಲು ಹೋದಾಗ ಚಾಸಾ- 5 ರವರಿಗೂ ಸಹ ಕಣ್ಣಿಗೆ ಕಾರದ ಪುಡಿ ಎರಚಿ ಅವರಿಗೂ ಸಹ ಕಟ್ಟಿಗೆಯಿಂದ ಹೊಡೆದು ಕೆಳಕ್ಕೆ ದೂಕಿರುತ್ತಾರೆ. ಎಡಗೈ ಮತ್ತು ಎಡಗಾಲಿನ ಹೆಬ್ಬಟ್ಟಿಗೆ ಕಟ್ಟಿಗೆಯಿಂದ ಹೊಡೆದು ಮತ್ತು ಕಾಲಿನಿಂದ ಒದ್ದಿರುತ್ತಾರೆ. ನಾನು ಅಲ್ಲಿಯೇ ಇದ್ದೆ ನನಗೂ ಸಹ ಕಣ್ಣಿಗೆ ಕಾರದ ಪುಡಿಯನ್ನು ಎರಚಿ ನನ್ನ ತಲೆಗೆ ಕಟ್ಟಿಗೆಯಿಂದ ಹೊಡೆಯಲು ಬಂದಾಗ ನಾನು ಕೈಯನ್ನು ಅಡ್ಡಲಾಗಿ ಕೊಟ್ಟಿರುತ್ತೇನೆ. ನನ್ನ ಕೈಗೆ ಕಟ್ಟಿಗೆ ಏಟು ಬಿದ್ದು ಒಳನೋವಾಗಿರುತ್ತದೆ ಹಾಗೂ ಕೈಯಿಂದ ನನ್ನ ಮೈ ಕೈಗೆ ಆರೋಪಿತರೆಲ್ಲರೂ ಹೊಡೆದಿರುತ್ತಾರೆ. ಆರೋಪಿತರೆಲ್ಲರೂ ಏ ಸೂಳೇ ಮಕ್ಕಳೇ ಇನ್ನೊಮ್ಮೆ ಬಂದರೇ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಮ್ಮ ಟ್ರ್ಯಾಕ್ಟರ್ ನ ಚಕ್ರದಲ್ಲಿದ್ದ ಗಾಳಿಯನ್ನು ಬಿಟ್ಟು ಟ್ರ್ಯಾಕ್ಟರ್ ಚಕ್ರವನ್ನು ಕೊಡಲಿಯಿಂದ ಕತ್ತರಿಸಿರುತ್ತಾರೆ. ಆ ನಂತರ ನಾನು ನಮ್ಮ ತಂದೆ ಮತ್ತು ನನ್ನ ದೊಡ್ಡಪ್ಪ ರವರನ್ನು ಕೊಟ್ಟೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತೇನೆ. ಅಲ್ಲಿ ವೈದ್ಯರು

ಪ್ರಾಥಮಿಕ ಚಿಕಿತ್ಸೆಯನ್ನು ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ಆ ನಂತರ ದಿನಾಂಕ 19.06.2021 ರಂದು ಈ ಸಂಬಂಧವಾಗಿ ಕೊಟ್ಟೂರು ಪೊಲೀಸ್ ಠಾಣೆಯಲ್ಲಿ ದೂರುನ್ನು ಕೊಟಿಟರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ಅದನ್ನು ನಿಪಿ- 1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1.(ಎ) ಎಂದು ಗುರುತಿಸಲಾಯಿತು. ನಾನುದೂರು ನೀಡಿದ ನಂತರ ಮಾರನೇ ದಿನ ಪೊಲಿಸರು ಗಲಾಟೆ ನಡೆದ ಸ್ಥಳಕ್ಕೆ ಬಂದಿದ್ದರು. ಅಲ್ಲಿ ಘಟನಾ ಸ್ಥಳವನ್ನು ನಾನು ತೋರಿಸಿದ ಮೇರೆಗೆ ಚಾಸಾ- 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.30 ರವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನ್ನು ನೋಡುತ್ತಿದ್ದು ಅದನುನ ನಿಪಿ- 2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಘಟನಾ ಸ್ಥಳದಲ್ಲಿ ಒಂದು ಪೊಟೊವನ್ನು ತೆಗೆದಿದ್ದು ಅದನ್ನು ನಿಪಿ- 3 ಎಂದು, ಆ ಕಾಲಕ್ಕೆ ಒಂದು ಕಚ್ಚಾ ನಕಾಶೆಯನ್ನು ತಯಾರಿಸಿದ್ದು ಅದನ್ನು ನಿಪಿ-4 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆರೋಪಿತರು ನಮಗೆ ಎರಚಿ ಉಳಿದ ಕಾರದ ಪುಡಿಯನ್ನು ಒಂದು ಪ್ಲಾಸ್ಟಿಕ) ಕವರ್ ನ್ನು ಹಾಜರು ಪಡಿಸಿದ್ದು ಅದನ್ನು ಮುದ್ದೆ ಮಾಲು - 1 ಎಂದು, ಆರೋಪಿತರು ನಮಗೆ ಹಲ್ಲೆ ಮಾಡಿದ ಎರಡು ಕಟ್ಟಿಗೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆ ಮಾಲು 2 ಮತ್ತು 3 ಎಂದು ಗುರುತಿಸಲಾಗಿದೆ.

ತದನಂತರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 20.06.2021 ರಂದು ಹೇಳಿಕೆ ನೀಡಿರುತ್ತೇನೆ. ಆದರೆ ಸದರಿ ಹೇಳಿಕೆಯಲ್ಲಿ ಸರ್ವೆ ನಂಬರ್ 940 ರಲ್ಲಿ ವಿಸ್ತಿರ್ಣ 3.69 ಸೆಂಟ್ಸ್ ಎಂದು ನಾನು ಹೇಳಿಕೆ ಕೊಟ್ಟಿದ್ದು ಆದರೆ 3.90 ಸೆಂಟ್ಸ್ ಎಂದು ತಪ್ಪಾಗಿ ಬರೆದುಕೊಳ್ಳಲಾಗಿದೆ. ಸದರಿ ಆಸ್ತಿಯಲ್ಲಿ ನಮ್ಮ ತಾತನ ಕಾಲದಿಂದಲೂ ನಾವು ಸಾಗುವಳಿ ಮಾಡುತ್ತಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದು ಆದರೆ ಪೊಲಿಸಿನವರು ಕಳೆದ ನಾಲ್ಕು ವರ್ಷಗಳಿಂದ ಆರೋಪಿತರು ಸಾಗುವಳಿ ಮಾಡುತ್ತಿದ್ದರು ಎಂಬುವುದಾಗಿ ತಪ್ಪಾಗಿ ಬರೆದುಕೊಂಡಿರುತ್ತಾರೆ. ಆದರೆ ನಾನು ಆ ರೀತಿ ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯ ಒಪ್ಪಿಕೊಳ್ಳದ ಭಾಗವನ್ನು ನಿಪಿ- 5 ಎಂದು ಗುರುತಿಸಲಾಯಿತು.

(ಸ.ಸ.ಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷೀ ಅಂತ ಪರಿಗಣಿಸಲಾಯಿತು ಹಾಗೂ ಸ.ಸ.ಅ ರವರ ಕೋರಿಕೆಯಂತೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

(ಮುಂದುವರೆದ ಮುಖ್ಯವಿಚಾರಣೆಯನ್ನು ಸ.ಸ.ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ,ಹೇ,ಕೇ,ಸರಿ ಇದೆ,

ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.